ಪೊಲೀಸ್ ಇಲಾಖೆಯ ಕೆ.ಎಸ್.ಆರ್.ಪಿ.ಯ ನಾಲ್ಕನೇ ಪಡೆಯಿಂದ ಅನಧಿಕೃತ ಗೋಡೆಯನ್ನು ನಿರ್ಮಾಣ ಮಾಡಿರುವುದನ್ನು ತೆರವುಗೊಳಿಸುವ ಸಂಬಂಧ ತಯಾರಿಸಲಾಗಿರುವ ಸಮಿತಿಯ ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

**ಅಧ್ಯಕ್ಷರು:** ವರದಿಯನ್ನು ಒಪ್ಪಿಸಲಾಯಿತು.

ಪ್ರಶ್ನೋತ್ತರ ಕಲಾಪ ಈ ದಿವಸ 1.45 ಗಂಟೆ ತೆಗೆದುಕೊಂಡಿದೆ. ನಾನು ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿಸುತ್ತೇನೆ. ಒಂದು ಗಂಟೆಯೊಳಗೆ ಮುಗಿಸುವುದಕ್ಕೆ ಎಲ್ಲರದ್ದು ಸಹಕಾರ ಬೇಕು ಎಂದು ವಿನಂತಿ ಮಾಡುತ್ತೇನೆ.

ಈಗ ಶೂನ್ಯವೇಳೆ, ಶ್ರೀ ನೆ.ಲ. ನರೇಂದ್ರಬಾಬು ಮಾತನಾಡಿ.

**3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

ಅ) ವಿಷಯ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಿಗೆ ಪಠ್ಯಪುಸ್ತಕಗಳ ವಿತರಣೆ ಬಗ್ಗೆ.

**ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್):** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಲ್ಲಿ ವಿನಂತಿಸುತ್ತೇನೆ. ನಿನ್ನೆ ದಿವಸ ಪಠ್ಯಪುಸ್ತಕಗಳು ಇನ್ನೂ ಕೊಟ್ಟಿಲ್ಲವೆಂದು ಕೇಳಿದಾಗ ಅವರು ನಿಖರವಾದಂಥ ಉತ್ತರವನ್ನು ಕೊಡಲಿಲ್ಲ. ಅದಕ್ಕೆ ನಾನು ಮತ್ತೆ ವಿನಂತಿಸುತ್ತೇನೆ. ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಕೊಡದೇ ಇರುವುದರಿಂದ ಹಾಗೂ ಒಂದು ಶಾಲೆಗೆ ಕೊಡುವುದು, ಮತ್ತೊಂದು ಶಾಲೆಗೆ ಕೊಡದಿರುವುದರಿಂದ ಅವರ ಅಮೂಲ್ಯವಾದ ಸಮಯ ವ್ಯರ್ಥವಾಗುತ್ತಿದೆ. ನಿಖರವಾಗಿ ಎಷ್ಟು ದಿವಸಗಳೊಳಗೆ ನೀವು ಪಠ್ಯಪುಸ್ತಕಗಳನ್ನು ಕೊಡುವಿರಿ ಎಂದು ತಿಳಿಸಿ. ಅನುದಾನಿತ ಶಾಲೆಗಳಲ್ಲಿ ಡಿ.ಡಿ.ಗಳನ್ನು ತಡವಾಗಿ ಕೊಟ್ಟಿದ್ದಾರೆಂದು ನೀವು ಹೇಳಿದಿರಿ. ನೇರವಾಗಿ

ನಮ್ಮ ಶಾಲೆಗಳಿಗೆ ಸಂಬಂಧಪಟ್ಟ ಬಿ.ಇ.ಒ.ಗಳನ್ನು ಸಂಪರ್ಕಿಸಿ, ಶಾಲೆಗಳಿಗೂ ಹೋಗಿ ಭೇಟಿ ಮಾಡಿದ್ದೇವೆ. ನಮ್ಮ ಕ್ಷೇತ್ರದಲ್ಲಿಯೂ ಸಹ ಬಹಳಷ್ಟು ಶಾಲೆಗಳಿಗೆ ಅನುದಾನಿತ ಶಾಲೆ ಮತ್ತು ಸರ್ಕಾರಿ ಶಾಲೆಗಳಿಗೆ ಪಠ್ಯಪುಸ್ತಕಗಳು ಬಂದಿಲ್ಲ. ಎಷ್ಟು ದಿವಸಗಳಲ್ಲಿ ಕೊಡತಕ್ಕಂಥ ಉದ್ದೇಶ ಸರ್ಕಾರಕ್ಕೆ ಇದೆ ಎಂಬ ಬಗ್ಗೆ ದಯವಿಟ್ಟು ತಿಳಿಸಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):** ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಸಹ ಇದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಹೇಳಿದ್ದೇನೆ. ನಾನು ಇವತ್ತು ಸಹ ಮತ್ತೊಮ್ಮೆ ಸ್ಪಷ್ಟಪಡಿಸುವುದೇನೆಂದರೆ, ಸರ್ಕಾರಿ ಶಾಲೆಗಳಿಗೆ ಉಚಿತವಾಗಿ ಕೊಡುವಂಥ ಪಠ್ಯಪುಸ್ತಕಗಳಲ್ಲಿ ಶೇಕಡ 95 ರಷ್ಟು ಪುಸ್ತಕಗಳನ್ನು ನಾವು ಕೊಟ್ಟಿದ್ದೇವೆ. ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಿಗೆ ನಾವು ಜನವರಿ ಒಳಗೆ ಡಿ.ಡಿ. ಕೊಡುವುದಕ್ಕೆ ಹೇಳಿದ್ದೆವು. ಅದಾದ ನಂತರ ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ಸರ್ಕಾರದ ನಿಲುವನ್ನು upheld ಮಾಡಿದ್ದಾರೆ. ಆದಾದ ನಂತರ ಅನೇಕರು ಅವರಿಗೆ ಡಿ.ಡಿ. ಕೊಡಬೇಡಿ. ನಾವು ಸರ್ಕಾರದ ಮೇಲೆ ಒತ್ತಡ ತಂದು ನಿಮಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಕೊಡಿಸುತ್ತೇವೆಂದು ಹೇಳಿ ಡಿ.ಡಿ. ಕೊಡುವುದಕ್ಕೆ ಮುಂದಾದವರಿಗೂ ಸಹ ಕೊಡದಿರುವಂತಹ ವಾತಾವರಣವನ್ನು ಸೃಷ್ಟಿ ಮಾಡಿದರು. ಹಾಗಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಡಿ.ಡಿ. ಕೊಡುವುದಕ್ಕೆ ವಿಳಂಬವಾಗಿರುವುದರಿಂದ ಪಠ್ಯಪುಸ್ತಕಗಳನ್ನು ಕೊಡುವುದಕ್ಕೆ ಸ್ವಲ್ಪ ತೊಂದರೆಯಾಗಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ ಆದರೆ ಡಿ.ಡಿ. ಕೊಟ್ಟವರಿಗೆ ಶೇಕಡ 80 ರಷ್ಟು ಪುಸ್ತಕಗಳನ್ನು ಕೊಟ್ಟಿದ್ದೇವೆ. ನಾನು ನಿನ್ನೆ ಹೇಳಿದ ಹಾಗೆ ಮೊನ್ನೆ ಸಹ ಒಂದು ಲಕ್ಷ ಪುಸ್ತಕಗಳಿಗೆ ಡಿ.ಡಿ. ಬಂದಿದೆ. ಮೊನ್ನೆ ಡಿ.ಡಿ. ಕೊಟ್ಟರೆ ನಮಗೆ ಪುಸ್ತಕಗಳನ್ನು ಮುದ್ರಿಸಿ ಕೊಡುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಇದರೊಳಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ನಮ್ಮ ಸರ್ಕಾರದ ಸುತ್ತೋಲಗಳನ್ನು/ಆದೇಶಗಳನ್ನು ಪಾಲಿಸದೇ ಇರುವುದರಿಂದಾಗಿ ಈ ಗೊಂದಲ ನಿರ್ಮಾಣವಾಗಿದೆಯೇ ಹೊರತು ಸರ್ಕಾರದ ಯಾವುದೇ ದೋಷ ಇದರಲ್ಲಿ ಇಲ್ಲ. ನಾವು ಕಡಿಮೆ ದರದಲ್ಲಿ ಉತ್ತಮ ಗುಣ ಮಟ್ಟದ ಪುಸ್ತಕಗಳನ್ನು ಮುದ್ರಣ ಮಾಡಿಕೊಟ್ಟಿದ್ದೇವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ನಿಗದಿತ ಅವಧಿಯೊಳಗೆ ಡಿ.ಡಿ.ಯನ್ನು ಕೊಟ್ಟಿದ್ದರೆ ಈ ಸಮಸ್ಯೆ ಮುಂದುವರೆಯುತ್ತಿರಲಿಲ್ಲ. ಕೆಲವು ಶಿಕ್ಷಣ ಸಂಸ್ಥೆಗಳು ಮೊದಲೇ ಜನವರಿ–ಫೆಬ್ರವರಿಯಲ್ಲಿ ಕೊಟ್ಟಿರಬಹುದು. ಅವರಿಗೂ ಸಹ ಪುಸ್ತಕ ಈ ಕಾರಣದಿಂದ ಬಂದಿಲ್ಲ ಹೊರತು, ಬೇರೆ ಕಾರಣವಿಲ್ಲ. ಮೊದಲನೇ ಸಲ ಡಿ.ಡಿ. ಕೊಟ್ಟವರಿಗೆ ಪುಸ್ತಕ ಕೊಟ್ಟಿದ್ದೇವೆ. ಪುಸ್ತಕ ಕೊಡುವಾಗ ಮೊದಲು ಡಿ.ಡಿ. ಕೊಟ್ಟವರು, ಸ್ವಲ್ಪ ಆಮೇಲೆ ಡಿ.ಡಿ. ಕೊಟ್ಟವರು ಎಂದು ಸ್ಥಳೀಯ ಮಟ್ಟದಲ್ಲಿ ವ್ಯತ್ಯಾಸ ಆಗಿರಬಹುದು. ಆದರೆ ಡಿ.ಡಿ. ಕೊಟ್ಟವರಿಗೆ 80% ಕೊಟ್ಟಿದ್ದೇವೆ. ಉಳಿದಿರುವ ಪುಸ್ತಕಗಳನ್ನು maximum ಜುಲೈ 20–25ನೇ ತಾರೀಖಿನೊಳಗೆ ಪೂರ್ಣ ಪ್ರಮಾಣದಲ್ಲಿ ಪುಸ್ತಕಗಳನ್ನು ಕೊಟ್ಟು ಮುಗಿಸುವುದಕ್ಕೆ ನಾವೆಲ್ಲಾ ರೀತಿಯ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

**ಅಧ್ಯಕ್ಷರು:** ಇದು ಶೂನ್ಯವೇಳೆ, ನಾನು ಅಭಯಚಂದ್ರ ಜೈನ್‌ರವರನ್ನು ಕರೆದಿದ್ದೇನೆ.

**ಶ್ರೀ ನೆ.ಲ. ನರೇಂದ್ರಬಾಬು:** ಮಾನ್ಯ ಅಧ್ಯಕ್ಷರೆ, ಜುಲೈ 25 ರೊಳಗೆ ಕೊಡುತ್ತೇವೆಂದು ಹೇಳಿತ್ತಿದ್ದಾರೆ. ಇವತ್ತು Largest text book ಗಳನ್ನು ಕೊಟ್ಟಿಲ್ಲ.

**ಅಧ್ಯಕ್ಷರು:** ನೋಡಿ, ನರೇಂದ್ರಬಾಬುರವರೆ, ನಾನು ದಾಖಲೆಗೆ ಹೋಗಬಾರದು ಎಂದು ಹೇಳಿತ್ತೇನೆ ಅಷ್ಟೇ. ಶೂನ್ಯವೇಳೆಯಲ್ಲಿ ಪ್ರಸ್ತಾಪ

ಮಾಡಿದ್ದೀರಿ, ಅವರು ಅದಕ್ಕೆ ಉತ್ತರವನ್ನು ಹೇಳಿದ್ದಾರೆ. ಮತ್ತೆ ಮತ್ತೆ ಕೇಳುತ್ತೀರಲ್ಲಾ? ಅಭಯಚಂದ್ರ ಜೈನ್‌ರವರು ಪ್ರಸ್ತಾಪ ಮಾಡಿ.

**ಶ್ರೀ ನೆ.ಲ. ನರೇಂದ್ರಬಾಬು:** ಉತ್ತರ ಸ್ಪಷ್ಟವಾಗಿರಲಿಲ್ಲ. ಅದಕ್ಕೆ ನಾನು ಕೇಳುತ್ತಿರುವುದು. ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು ಎಂದ ಹಾಗೆ ಇವರ ಗೊಂದಲದಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳೇ ಬಂದಿಲ್ಲ.

**ಅಧ್ಯಕ್ಷರು:** ನಾನು ಅಭಯಚಂದ್ರ ಜೈನ್‌ರವರನ್ನು ಕರೆದಿದ್ದೇನೆ. ಆಯಿತು. ನಿನ್ನೆ ಕೂಡ ಅದನ್ನೇ ಹೇಳಿದ್ದೀರಿ, ಅಭಯಚಂದ್ರ ಜೈನ್ ನೀವು ಪ್ರಸ್ತಾಪ ಮಾಡಿ.

**ಆ) ವಿಷಯ : ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ವಿವಿಧ ಬೇಡಿಕೆಗಳ ಬಗ್ಗೆ.**

**ಶ್ರೀ ಕೆ. ಅಭಯಚಂದ್ರ ಜೈನ್ (ಮೂಡಬಿದರೆ):** ಮಾನ್ಯ ಶಿಕ್ಷಣ ಸಚಿವರಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ವಿವಿಧ ಬೇಡಿಕೆಗಳ ಬಗ್ಗೆ ಪರಿಶೀಲಿಸಲು ನೇಮಕ ಮಾಡಲಾಗಿದ್ದ ಪ್ರೊಫೆಸರ್ ಎಲ್.ಆರ್. ವೈದ್ಯನಾಥನ್ ಸಮಿತಿಯು ನೀಡಿರುವ ವರದಿಯನ್ನು ಸರ್ಕಾರ ಒಪ್ಪಿಕೊಂಡು ದಿನಾಂಕ: 30–08–2007 ರಂದು ಆದೇಶ ಹೊರಡಿಸಿದ್ದರೂ ಸಹ ಇದುವರೆಗೆ ಅನುಷ್ಠಾನಕ್ಕೆ ಬಂದಿರುವುದಿಲ್ಲ. ಈ ಬಗ್ಗೆ ದಿನಾಂಕ: 08–07–2010 ರಂದು ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇವೆ.

**ಶ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):** ಮಾನ್ಯ ಅಧ್ಯಕ್ಷರೆ, ಶ್ರೀಯುತ ಅಭಯಚಂದ್ರ ಜೈನ್‌ರವರು ನಮ್ಮ ದೈಹಿಕ ಶಿಕ್ಷಕರ ಕುರಿತಂತೆ ಇರುವ ಸಮಸ್ಯೆಗಳನ್ನು ಉಲ್ಲೇಖ ಮಾಡುವಂತಹ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ.